ಶ್ರೀ ಮೊಹಮ್ಮದ್ ಮೊಯೀನುದ್ದೀನ್ (ವಸತಿ ರಾಜ್ಯ ಸಚಿವರು),—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಡ್ಕೋ ಯೋಜನೆಯಡಿಯಲ್ಲಿ ಪ್ರಾರಂಭದಿಂದ ಇದುವರೆವಿಗೂ (೧೯೭೮ರಿಂದ ೧೯೮೪) ಮಂಜೂರಾಗಿರುವ ಮನೆಗಳ ಸಂಖ್ಯೆ ೧೨೩೭,

ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹರಿಜನ –ಗಿರಿಜನರಿಗೆ ಮಂಜೂರಾಗಿರುವ ಮನೆಗಳು ೧೨೬೯.

ಅನುಬಂಧ

	ತಾಲ್ಲೂಕು	ಮನೆಗಳ ಸಂಖ್ಯೆ
೧)	ಕಾರವಾರ	೯೮೯
೨)	ಅಂಕೋಲ	೯೬೨
೩)	ಕುಮಟಾ	೨೧೨೩
೪)	ಹೊನ್ನಾವರ	೨೦೭೫
೫)	ಬಟ್ಕಳ	೮೯೫
೬)	ಸಿರಸಿ	೮೧೭
೭)	ಸಿದ್ದಾಪುರ	೮೦೦
೮)	ಯಲ್ಲಾಪುರ	೬೭೧
೯)	ಮುಂಡಗೋಡ	೧೪೩೦
೧೦)	ಸೂಪ	೫೧೯
೧೧)	ಹಳಿಯಾಳ	೧೦೮೪
	ಒಟ್ಟು	೧೨೩೭

ಮುಖ್ಯಮಂತ್ರಿಗಳ ಭಾಷಣದ ಪ್ರತಿಗಳು

೧೮೦೬. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಮುಖ್ಯಮಂತ್ರಿಗಳ ವಿವಿಧ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಲಾಗಿದೆ ?

ಆ) ಪ್ರತಿ ಪುಸ್ತಕದ ಶೀರ್ಷಿಕೆ ಮುದ್ರಿತ ಪ್ರತಿಗಳ ಸಂಖ್ಯೆ ಹಾಗೂ ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ೧೯೮೫–೮೬, ೧೯೮೬–೮೭, ೧೯೮೭–೮೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಒಟ್ಟು ೧೫ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ.

ಆ) ಪ್ರತಿ ಪುಸ್ತಕದ ಶೀರ್ಷಿಕೆ ಮುದ್ರಿತ ಪ್ರತಿಗಳ ಸಂಖ್ಯೆ ಹಾಗೂ ತಗಲಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕಳೆದ ೩ ವರ್ಷಗಳಲ್ಲಿ ಮುಖ್ಯಮಂತ್ರಿಗಳ ಭಾಷಣಗಳನ್ನು ವಾರ್ತಾ ಇಲಾಖೆಯು ಪುಸ್ತಕ ರೂಪದಲ್ಲಿ ತರಲಾದ ವಿವರ

ಸಂಖ್ಯೆ	ಪ್ರಕಟಿತ ವರ್ಷ	ಪುಸ್ತಕದ ಹೆಸರು	ಯಾರಿಂದ ಮುದ್ರಿತ	ಪ್ರತಿಗಳ ಸಂಖ್ಯೆ	ತಗಲಿದ ವೆಚ್ಚ
೧.	೧೯೮೫–೮೬	೧) ಬಲಾಢ್ಯ ಕೇಂದ್ರಕ್ಕೆ ಬಲಿಷ್ಠ ರಾಜ್ಯಗಳೆ ಬುನಾದಿ (ಕನ್ನಡ)	ಮೆ. ಅಡ್ವಿಟ್ (ಇಂಡಿಯಾ) ಬೆಂಗಳೂರು	೫.೦೦೦	೮೦,೦೨೦–೦೦
೨.	–,,–	೨) ಬಲಾಢ್ಯ ಕೇಂದ್ರಕ್ಕೆ ಬಲಿಷ್ಠ ರಾಜ್ಯಗಳೆ ಬುನಾದಿ (ಹಿಂದಿ)	–,,–	೫ ೦೦೦	೪೧,೨೫೦–೦೦
೩.	–,,–	೩) ಸ್ವಾಂಗ್ ಸ್ಟೇಟ್ಸ್ ಆರ್ ಇಂಪೀರೇಟಿವ್ ಪಾರ್ ಎ ಪವರ್ ಫುಲ್ ಸೆಂಟರ್ (ಇಂಗ್ಲೀಷ್)	ಮೆ. ಅನುಭವ ಪ್ರಿಂಟರ್ಸ್ ಬೆಂಗಳೂರು	೧೦,೦೦೦	೫೬.೫೯೫–೦೦
೪)	–,,–	೪) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಮುಖ್ಯಮಂತ್ರಿಗಳ ಭಾಷಣ	ಮೆ. ಅಡ್ವಿಟ್ (ಇಂಡಿಯಾ) ಬೆಂಗಳೂರು	೫.೦೦೦	೮೦.೮೦೦.೦೦
೫)	–,,–	ಪ್ರಸಾರ ಮಾಧ್ಯಮ ಸ್ವಾತಂತ್ರ್ಯ (ಕನ್ನಡ)	–,,–	೫,೦೮೦	೮೦,೦೦೦.೦೦
೬.	೧೯೮೭–೮೮	ಶ್ರೀ ರಾಮಕೃಷ್ಣ ಹೆಗಡೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಕೆಲವು ಆಯ್ದ ಭಾಷಣಗಳು–೧	ಸರ್ಕಾರಿ ಮುದ್ರಣಾಲಯ ಬೆಂಗಳೂರು	೫೦,೦೦೦	೧,೩೨,೯೬೫.೯೦